ಕಥೆ

# ಜಂಬಂಣನ ಸ್ವರ್ಗಾರೋಹಣ



**ಎಸ್. ಸುರೇಂದ್ರನಾಥ್**

ಕಲೆ: ವಿಶ್ವನಾಥ್ ಎ.ಎಸ್.

ನಮ್ಮೂರಗೆ ಜಂಬಂಣ ಅಂತ ದೊಡ್ಡ ಸಾವ್ಕಾರಿದ್ದ. ತಂಬಾಕು, ಅಡಿಕೆ, ತೆಂಗಿನಕಾಯಿ ಅಂತ ದಲ್ಲಾಳಿ ವ್ಯಾಪಾರ ಮಾಡ್ಕಂಡಿದ್ದ. ಜತೆಗೇ ಲೇವಾದೇವೀನೂ ಮಾಡ್ತಿದ್ದ. ಸಾಲ ಕೊಡಬೇಕಾರೆ ನಯಸ್ಸಾಗಿ ಮಾತಾಡಿ, ಸಾಲ ವಸೂಲಿ ಮಾಡಬೇಕಾರೆ ಮಾತ್ರ ಸಾಲ ತಗಂಡೋರ ಕಿಬ್ಬದಿ ಕೀಲು ಮುರೀತಿದ್ದ. ಒಂದಿಸ ಹೆಣ್ತಿ ಮಗ್ಗಲಗೆ ಮಲಗಿದೋನು, ಏಳ್ಳೇ ಇಲ್ಲ, ಹಂಗೇ ಹೋಗಿಬಿಟ್ಟ. ಉಸಿರು ನಿಂತ ಮಾರನೇ ಮಿನಿಟ್ನಗೆ ಯಮಧರ್ಮನ ಎದುರಿಗೆ ನಿಂತಿದ್ದ. ಯಮಧರ್ಮ ಒಂದು ರೆಜಿಸ್ಟರ್ ಕೈನಗೆ ಹಿಡಕಂಡು ಕೂತಿದ್ದ. ಕೋಣ, ಗೀಣ, ಗದೆ, ಹಗ್ಗ ಯಂಥಾದ್ದೂ ಇರಲಿಲ್ಲ. ಹಂಗಾಗಿ ಇವ್ನೇ ಯಮ ಅಂತ ಜಂಬಂಣಗೆ ಗೊತ್ತಾಗಕ್ಕೆ ಒಂದೆರಡು ಮಿನಿಟು ಬೇಕಾದ್ವು.

ಒಂದಪ ಕೆಮ್ಮಿ ಯಮಧರ್ಮ ಹೇಳಿದ, 'ನಿನ್ನ ಹೆಸರೂ ಜಂಬಣ್ಣ ಅಂತ.'

'ಅಲ್ಲ, ಜಂಬಂಣ ಅಂತ.'

'ಏನು ಹಂಗಂದ್ರೆ, ನಾನು ಹೇಳಿದ್ದೂ ಅದುನ್ನೇ.'

'ನೀನು ಹೇಳಿದ್ದು ಜಂಬಣ್ಣ ಅಂತ, ನನ್ನೆಸ್ರು ಜಂಬಂಣ.'

ಯಮಧರ್ಮಂಗೆ ಇವತ್ತು ಯಾಕೋ ನೆಟ್ಟಗಿಲ್ಲ ಅನ್ನುಸ್ತು. 'ಸರೀನಪಾ, ಹಂಗೇ ಆಗ್ಲಿ, ನೀನು ವ್ಯಾಪಾರ ಮಾಡ್ಕಂಡಿದೀಯ, ಸಾಲಾಗೀಲಾನೂ ಕೊಡ್ತೀಯ, ನಿನ್ನಂತೋರು ಬಾಳಾ ಅಪರೂಪ ನೋಡು ಈ ಲೋಕದಗೆ. ನಿನ್ನ ಕೇಸೇನಪಾ ಅಂದ್ರೇ' ಯಮಧರ್ಮ ರೆಜಿಸ್ಟರ್ ಪುಟಗಳನ್ನು ತಿರುವಿ ಹಾಕಿ ಜಂಬಂಣನ ಜಾತಕ ಹುಡುಕಕ್ಕೆ ಶುರು ಮಾಡಿದ.

'ನೀವದೇನೋ ಹುಡುಕಿ ತೀರ್ಪು ಕೊಡಾ ಮದಲು ನಾನು ಒಂದು ಮಾತು ಹೇಳಿಬಿಡ್ತೀನಿ ಕೇಳ್ರಿ. ನಿಮ್ ಲೆಕ್ಕದಾಗೆ ನಾನು ಬೇಕಾದಷ್ಟು ಪಾಪ ಮಾಡಿದೀನಿ. ಮಗ್ಗಲು ಮುರುದು ಸಾಲ ವಸೂಲಿ ಮಾಡಿದೀನಿ. ಯಾರು ಅತ್ರೂ ಕಿಮಿಕ್ ಅಂದಿಲ್ಲ. ಕಾಲಿಗೆ ಬಿದ್ರೂ ಕೇರ್ ಮಾಡಿಲ್ಲ. ಆದ್ರೆ ವಂದು ಮಾತು ಹೇಳ್ತೀನಿ ಕೇಳಿ. ಅನ್ಯಾಯದಾಗೆ ಒಬ್ಬನ